ಕವಿತೆ



## ನೂತನ ದೋಶೆಟ್ಟಿ

ಕಲೆ: ಬಸವರಾಜ ಕಲೆಗಾರ



# ಸುರಂಗ

ಸುರಂಗದೊಳಗಣ ದಾರಿಯೇ ಹಾಗೆ

ಮೊದಲು ಎದುರಾಗುವ ಕತ್ತಲು
ನಂತರ ತೂರುವ ಕಿರಣ
ಅಡರಿಕೊಳ್ಳುವ ವಾಸನೆ
ತುಂಬಿಕೊಳ್ಳುವ ಅಬ್ಬರ
ಕಿವಿಗಡಚಿಕ್ಕಿದರೂ ಸದ್ದು
ಎದೆಯೊಳಗೆ ಅವ್ಯಕ್ತ ಮೌನ

ಕತ್ತಲ ಸೀಳಿ ನುಗ್ಗುವ ಮೊದಲು
ಅಂಚಿನಲ್ಲೊಂದು ಅರಳುವ ಬೆಳಕು
ಮುಗ್ಧವಾಗಿ ನಗುವ ಮಗು
ಹೊಸ ಉಸಿರಿಗೆ ತೆರೆದ ನಗು
ಹುಯಿಲು ಕೇಕೆಗಳು ಮೇರೆಮೀರಿ
ಮತ್ತೆ ಸರಿಯುವ ದಾರಿ
ಇನ್ನೊಂದು ಆವರ್ತದೆಡೆಗೆ

ಅನುಭವದ ಹಾಗೇ...
ಕೊಂಚ ಹಿಂದು ಮುಂದು
ಸುರಂಗದೊಳಗಣ
ಬೆಳಕು ಕತ್ತಲಿನಾಟದಂತೆ.

# ಬಣ್ಣ

ಅದು ಮೋಡಸ್ಫಲನ
ಆಗಸ ಬಿರಿದು ಸುರಿದ ಜಲರೌದ್ರ!
ಅಲ್ಲಿಯೇ ಕೆಳಗೆ
ಲಂಗರಿನಲ್ಲಿ ಬೇಯುತ್ತಿತ್ತು ಅನ್ನ

ಸಾಲು ಹತ್ತಿ ಸೇತುವೆ ದಾಟಿದವರಿಗೆ
ತಮ್ಮ ನಂಬಿಕೆಯ ಕಾಣುವ ತವಕಆಗಲೇ
ಅಜಾನಿನ ಸದ್ದು ಮೀರಿ ಅಬ್ಬರಿಸಿತು ಆತಂಕ

ಹತ್ತಾರು ಲಗುಬಗೆಗಳು
ಕಲ್ಲು ಕರಗಿದ ನೀರಿನಡಿಯಲ್ಲಿ
ಉಸಿರ ಚೆಲ್ಲಿದವು.

ಎಲ್ಲವೂ ಸ್ತಬ್ಧವಾಗಿ
ಜೀವಗಳ ಹುಡುಹುಡುಕಿ ತೆಗೆದ ಕೈಗಳಿಗೆ,
ಹೊತ್ತು ಸಾಗಿದ ಹೆಗಲುಗಳಿಗೆ
ಸುರಿದು, ತೊಳೆದ ನೀರಿನಂತೆ
ಯಾವ ಬಣ್ಣವೂ ಇರಲಿಲ್ಲ.
ಯಾವ ಬಣ್ಣವೂ ಇರಲಿಲ್ಲ.

